**ದಿನಾಂಕಃ 21-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರಿದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀಮತಿ ಎನ್ ಟಿ ಕೆ ವಕೀಲರಿಂದಃ**

1. ನಾನು ಈ ದಿನ ಮುಖ್ಯ ವಿಚಾರಣೆಗಾಗಿ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿದ್ದೇನೆ . ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

2. ಈ ಕೆಳಕಂಡ ದಾಖಲಾತಿಗಳನ್ನು ನಾನು ಹಾಜರು ಪಡಿಸುತ್ತಿದ್ದೇನೆ . ಅವುಗಳನ್ನು ನಿಶಾನೆ ಮಾಡಬೇಕಾಗಿ ಕೋರುತ್ತೇನೆ .

ನಿ.ಎಂ.1 – Report of Depot Manager, Yellapur along with attendance extract dated 23.03.2018.

ನಿ.ಎಂ.2 – Call memo along with postal acknowledgment card dated 23.04.2018.

ನಿ.ಎಂ.3 – Letter of claimant along with Medical certificate dated 08.06.2018.

ನಿ.ಎಂ.4 – Permission letter of respondent dated 12.06.2018.

ನಿ.ಎಂ.5 – Show cause notice dated 12.06.2018.

ನಿ.ಎಂ.6 – Letter of claimant in respect of reporting for duty dated 15.06.2018.

ನಿ.ಎಂ.7 – Notice of appointment of enquiry officer dated 24.07.2018.

ನಿ.ಎಂ.8 – Enquiry notice dated 24.08.2018.

ನಿ.ಎಂ.9 – Enquiry proceedings dated 28.09.2018.

ನಿ.ಎಂ.10 – Enquiry proceedings dated 04.01.2019.

ನಿ.ಎಂ.11– Enquiry proceedings dated 11.01.2019.

ನಿ.ಎಂ.12– Defence statement of claimant dated 11.01.2019.

ನಿ.ಎಂ.13 – Order sheets of enquiry officer.

ನಿ.ಎಂ.14 – Findings of enquiry officer dated 30.01.2019.

ನಿ.ಎಂ.15– Copy of show cause notice dated 11.02.2019.

ನಿ.ಎಂ.16 – History sheet.

ನಿ.ಎಂ.17– Noting sheets of disciplinary authority.

ನಿ.ಎಂ.18– Copy of removal order dated 13.04.2019.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎನ್ ಎಸ್ ಬಿ ವಕೀಲರಿಂದಃ**

3. ನಾನು ಈಗ ಯಾದಗಿರಿಯಲ್ಲಿ ಕೆಲಸ ಮಾಡುತ್ತಿದ್ದೇನೆ . ಈ ಕೇಸಿನಲ್ಲಿ ನನಗೆ ಹಾಜರಾಗಿ ಸಾಕ್ಷ್ಯ ನೀಡಲು ನಮ್ಮ ಸಂಸ್ಥೆಯಿಂದ ನನಗೆ ಪತ್ರ ಬಂದಿದೆ . ಆ ಪತ್ರವನ್ನು ನಾನು ಹಾಜರುಪಡಿಸಿಲ್ಲ . ಬೇಕಿದ್ದಲ್ಲಿ ಈಗಲೇ ಹಾಜರು ಪಡಿಸುತ್ತೇನೆ . ಸಾಕ್ಷಿಯು ಆ ಪತ್ರವನ್ನು ಈಗ ಹಾಜರುಪಡಿಸಿರುತ್ತಾರೆ . ಅದನ್ನು ನಿ.ಎಂ. 19 ಎಂದು ಗುರುತಿಸಲಾಯಿತು . ಅದು ನೆರಳಚ್ಚು ಪ್ರತಿಯಾಗಿದೆ . ಅರ್ಜಿದಾರನ ವಿರುದ್ಧ ವಿಚಾರಣೆ ಕಾಲದಲ್ಲಿ ಅರ್ಜಿದಾರನಿಗೆ ಕಾಲಕಾಲಕ್ಕೆ ನೋಟಿಸನ್ನು ನೀಡಲಾಗಿದೆ . ಅರ್ಜಿದಾರ ಇಲಾಖಾ ವಿಚಾರಣೆಯಲ್ಲಿ ಹಾಜರಾಗಿರುವ ಬಗ್ಗೆ ಅವನಿಂದ ರುಜುವನ್ನು ಆದೇಶ ಹಾಳೆಯಲ್ಲಿ ಪಡೆಯಲಾಗಿದೆ . ಅವನು ಮೌಖಿಕವಾಗಿ ಹೇಳಿದ್ದನ್ನು ದಾಖಲು ಮಾಡಿಕೊಂಡಿದ್ದೇನಾ ಎಂದರೆ ಪ್ರಾಥಮಿಕ ವಿಚಾರಣೆ ಸಂದರ್ಭದಲ್ಲಿ ಅರ್ಜಿದಾರ ನೀಡಿರುವ ಉತ್ತರಗಳನ್ನು ದಾಖಲು ಮಾಡಿಕೊಳ್ಳಲಾಗಿದೆ . ನಾನು ವಿಚಾರಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಕಾನೂನು ಅಡಿಯಲ್ಲಿ ಅವಕಾಶ ಇಲ್ಲ ಎಂದರೆ ಸರಿಯಲ್ಲ. ನಾನು ಸಿ ಮತ್ತು ಡಿ ಹಾಗೂ ಸ್ವಭಾವ ಸಿದ್ಧ ನ್ಯಾಯ ಸಿದ್ಧಾಂತದ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರನ ಹೇಳಿಕೆಯನ್ನು ಅವನು ಹೇಳಿದ ಪ್ರಕಾರ ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಅವನ ಪರ ಹೇಳಿಕೆ ನೀಡಲು ಮತ್ತು ದಾಖಲಾತಿ ನೀಡಲು ಸಾಕಷ್ಟು ಕಾಲಾವಕಾಶವನ್ನು ನಾನು ನೀಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನ ವಿರುದ್ಧ ಇದ್ದ ಆಪಾದನೆಯನ್ನು ಅವನಿಗೆ ತಿಳಿಸಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಸಂಸ್ಥೆಯ ಅಧಿಕಾರಿಯಾಗಿರುವುದರಿಂದ ಸಂಸ್ಥೆಯ ಪರವಾಗಿ ನಾನು ಆರೋಪಿ ವಿರುದ್ಧ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲಾತಿಗಳನ್ನೆಲ್ಲಾ ಇಲಾಖೆಗೆ ಸಹಾಯ ಮಾಡಲು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ .

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.